**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಶ್ರೀ ಎಂ.ಎನ್. ಶಂಕರನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಾಗಡಿ ಇವರಿಗೆ ಮಾನ್ಯ ಕೆ.ಎ.ಟಿಯು ಅರ್ಜಿ ಸಂಖ್ಯೆ:7395/2018 ರಲ್ಲಿ ನೀಡಿರುವ ತೀರ್ಪಿನ ಅಂಶಗಳನ್ನು ಪರಿಗಣಿಸಿ, ಸದರಿಯವರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಪರಿಷ್ಕೃತ ದಂಡನೆ ವಿಧಿಸುವ ಬಗ್ಗೆ –ಆದೇಶ.

ಓದಲಾಗಿದೆ.

1. ಮಾನ್ಯ ಉಪಲೋಕಾಯುಕ್ತರ ಕಲಂ 12(3) ರ ವರದಿ ಸಂಖ್ಯೆ:ಕಂಪ್ಲೆಂಟ್ /ಉಪಲೋಕ್/ಬಿಡಿ–2752/2012, ಡಿ.ಆರ್.ಇ–5, ದಿನಾಂಕ:12.3.2015.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 40 ಇಎನ್‌ಕ್ಯೂ 2015, ದಿನಾಂಕ:13.5.2015
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:Uplok-2/DE/264/2015, ARE-7, Dated: 18.06.2018 ಇದರೊಂದಿಗೆ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಇತರೆ ದಾಖಲೆಗಳು.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 55 ಇಎನ್‌ಕ್ಯೂ 2018, ದಿನಾಂಕ: 27.09.2018
5. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:7395/2018 ರಲ್ಲಿ ದಿನಾಂಕ:20.08.2019 ರಂದು ನೀಡಿರುವ ತೀರ್ಪು.
6. ಶ್ರೀ ಎಂ.ಎನ್.ಶಂಕರನಾರಾಯಣ ಇವರ ಮನವಿ ದಿನಾಂಕ:29.08.2019.

ಪ್ರಸ್ತಾವನೆ:–

ಶ್ರೀ ಶಂಕರಪ್ಪ ಬಿನ್ ಲೇಟ್ ರಾಮಯ್ಯ, ಬಿಸ್ಕೂರು ಗ್ರಾಮ, ಮಾಗಡಿ ತಾಲ್ಲೂಕು ಇವರು ಮಾನ್ಯ ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ್ದ ದೂರಿನಲ್ಲಿ ಬಿಸ್ಕೂರು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾದ ಶ್ರೀ ಶಿವಕುಮಾರ್ ಹಾಗೂ ಪಂಚಾಯತಿಯ ಇಂಜಿನಿಯರ್ ಆದ ಶ್ರೀ ರವಿನಂದನ್ ಇವರು 2011–12 ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಮಾಗಡಿ ತಾಲ್ಲೂಕು ಬಿಸ್ಕೂರು ಮುಖ್ಯ ರಸ್ತೆಯಿಂದ ಪಾಳ್ಯದ ಹಳ್ಳಿ ತಂಗುದಾಣದಿಂದ ಮರಡಿಗುಟ್ಟೆಯವರೆಗೆ ರಸ್ತೆ ಕಾಮಗಾರಿಯನ್ನು ಮಾಡದೇ ಇದ್ದರೂ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಆರೋಪಿಸಿದ್ದರ ಕುರಿತು ಮಾನ್ಯ ಉಪಲೋಕಾಯುಕ್ತರು ತನಿಖೆ ಕೈಗೊಂಡು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:13.5.2015 ರಂದು ಕಲಂ 12(3) ರ ಅನುಸಾರ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯನ್ನು ಪರಿಶೀಲಿಸಿ, ದೂರಿನಲ್ಲಿ ಆರೋಪಿಸಿದ್ದ ಕಾಮಗಾರಿಯ ಅನುಷ್ಠಾನದಲ್ಲಿ ಕಂಡು ಬಂದಿದ ಲೋಪದೋಷಗಳಿಗೆ ಕಾರಣರಾಗಿರುತ್ತಾರೆ ಎನ್ನಲಾದ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:13.05.2015 ರ ಆದೇಶದಲ್ಲಿ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

1. ಶ್ರೀ ಶಿವಕುಮಾರ್, ಹಿಂದಿನ ಕಾರ್ಯದರ್ಶಿ, ಬಿಸ್ಕೂರು ಗ್ರಾಮ ಪಂಚಾಯತ್, ಮಾಗಡಿ ತಾಲ್ಲೂಕು.

2. ಶ್ರೀ ಎಂ.ವಿ.ರವಿನಂದನ್. ಹಿಂದಿನ ಸಹಾಯಕ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ, ಮಾಗಡಿ.

3. ಶ್ರೀ ಎಂ.ಎನ್.ಶಂಕರನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ, ಮಾಗಡಿ,

4. ಡಾ:ಕೃಷ್ಣಾರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಾಗಡಿ

ಮಾನ್ಯ ಉಪಲೋಕಾಯುಕ್ತರು ಈ ಪ್ರಕರಣದಲ್ಲಿ ವಿಚಾರಣೆ ನಡೆಸಲು ಅಪರ ನಿಬಂಧಕರು, ವಿಚಾರಣೆಗಳು-7 ಇವರನ್ನು ನೇಮಕ ಮಾಡಿದ್ದರು. ಅದರಂತೆ ವಿಚಾರಣಾಧಿಕಾರಿಗಳು ವಿವರವಾದ ಇಲಾಖಾ ವಿಚಾರಣೆ ಕೈಗೊಂಡು ಶಿಸ್ತುಪ್ರಾಧಿಕಾರದ ಪರ ಎರಡು ಸಾಕ್ಷಿಗಳು ಹಾಗೂ ಹಲವಾರು ದಾಖಲೆಗಳನ್ನು ಪರಿಶೀಲಿಸಿ ಅಂತಿಮವಾಗಿ ಸಲ್ಲಿಸಿದ್ದ ವರದಿಯಲ್ಲಿ ಎಲ್ಲಾ ಆರೋಪಿತರ ವಿರುದ್ಧದ ಆರೋಪಗಳು ಸಾಬೀತಾಗುತ್ತವೆ ಎಂಬ ನಿರ್ಣಯದೊಂದಿಗೆ ಉಪಲೋಕಾಯುಕ್ತರಿಗೆ ವರದಿ ಸಲ್ಲಿಸಿದ್ದು, ಮಾನ್ಯ ಉಪಲೋಕಾಯುಕ್ತರು ವಿಚಾರಣಾಧಿಕಾರಿಗಳ ನಿರ್ಣಯಕ್ಕೆ ಸಹಮತಿ ವ್ಯಕ್ತಪಡಿಸಿ ಆರೋಪಿತರ ವಿರುದ್ಧ ಸಾಬೀತಾದ ಆರೋಪಗಳ ಗಂಭೀರತೆಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು.

ಮೇಲೆ ಓದಲಾದ ಕ್ರಮಾಂಕ (3) ರ ಪತ್ರದ ಮೂಲಕ ಸ್ವೀಕೃತವಾಗಿದ್ದ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಗಣಿಸಿ, ಆಪಾಧಿತರ ಪೈಕಿ ಶ್ರೀ ಶಿವಕುಮಾರ್, ಕಾರ್ಯದರ್ಶಿ ಇವರು ಸೇವೆಯಿಂದ ನಿವೃತ್ತಿ ಹೊಂದಿದ್ದರಿಂದ ಸದರಿಯವರಿಗೆ ದಂಡನೆ ವಿಧಿಸುವ ಸಕ್ಷಮ ಪ್ರಾಧಿಕಾರವು ನಿರ್ದೇಶಕರು, ಗ್ರಾಮ ಪಂಚಾಯತ್ ವಿಭಾಗವಾಗಿದ್ದರಿಂದ ಸದರಿಯವರಿಗೆ ವಿಚಾರಣಾ ವರದಿ ಅಗತ್ಯ ದಾಖಲೆಗಳನ್ನು ಕಳುಹಿಸಲಾಗಿತ್ತು,

ಮತ್ತೊಬ್ಬ ಅಧಿಕಾರಿಯಾದ ಡಾ:ಬಿ.ಕೃಷ್ಣಾರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ಇವರಿಗೆ ದಂಡನೆ ವಿಧಿಸಲು ಸದರಿ ಅಧಿಕಾರಿಯ ಮಾತೃ ಇಲಾಖೆಯಾದ ಪಶುಪಾಲಾನಾ ಮತ್ತು ಪಶುವೈಧ್ಯ ಸೇವಾ ಇಲಾಖೆಗೆ ವಿಚಾರಣಾ ವರದಿ ಅಗತ್ಯ ದಾಖಲೆಗಳನ್ನು ಕಳುಹಿಸಲಾಗಿತ್ತು. ಅದರಂತೆ ಸದರಿ ಇಲಾಖೆಯು ಸದರಿಯವರಿಗೆ ಆದೇಶ ಸಂಖ್ಯೆ ಪಸಂಮೀ 25 ಪಇವಿ 2018, ದಿನಾಂಕ:16.11.2018 ರಂದು ದಂಡನೆ ವಿಧಿಸಿರುತ್ತದೆ.

ಉಳಿದಂತೆ ಶ್ರೀ ಎಂ.ವಿ.ರವಿನಂದನ್ ಮತ್ತು ಶ್ರೀ ಎಂ.ಎನ್.ಶಂಕರನಾರಾಯಣ ಇವರಿಗೆ ಸಂಬಂಧಿಸಿದಂತೆ ಈ ಇಲಾಖೆಯಿಂದ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನೊಂದಿಗೆ 2 ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ ವಿವರಣೆ ಪಡೆದು ಸದರಿ ವಿವರಣೆ ದಾಖಲೆಗಳೊಂದಿಗೆ ಪರಿಶೀಲಿಸಿದ್ದು, ಆರೋಪದಲ್ಲಿ ತಿಳಿಸಿದ್ದಂತೆ ಬಿಸ್ಕೂರು ಮುಖ್ಯ ರಸ್ತೆಯಿಂದ ಪಾಳ್ಯದ ಹಳ್ಳಿ ತಂಗುದಾಣದಿಂದ ಮರಳಿಗುಟ್ಟೆ ರಸ್ತೆಯವರೆಗೆ ರಸ್ತೆ ಕಾಮಗಾರಿಯನ್ನು ರೂ.1,15,300/- ಅಂದಾಜು ಪಟ್ಟಿಯಲ್ಲಿ ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಯನ್ನು ಮಂಜೂರಾದ ಅಂದಾಜು ಪಟ್ಟಿಯನುಸಾರ ಅನುಷ್ಠಾನ ಮಾಡಿರುವುದಿಲ್ಲ. ಮಂಜೂರಾದ ಅಂದಾಜು ಪಟ್ಟಿಯಂತೆ 267 ಮೀಟರ್ ಉದ್ದಕ್ಕೆ ರಸ್ತೆ ಮಾಡಬೇಕಿದ್ದರೂ ಸಹ ಸದರಿ ಕಾಮಗಾರಿಯನ್ನು ನಿರ್ವಹಿಸದೇ ಮೋರಿ ಕಾಮಗಾರಿಯನ್ನು ಗ್ರಾಮ ಸಭಾದ ಅನುಮೋದನೆ ಇಲ್ಲದೇ ನಿರ್ಮಾಣ ಮಾಡಿ, ತೀವ್ರತರದ ನಿರ್ಲಕ್ಷ್ಯ ವಹಿಸಿರುವುದು ದಾಖಲೆಗಳಿಂದ ಸಾಬೀತಾದ ಹಿನ್ನಲೆಯಲ್ಲಿ ವಿಚಾರಣಾಧಿಕಾರಿಯವರ ನಿರ್ಣಯವನ್ನು ಅಂಗೀಕರಿಸಿ, ಇಬ್ಬರು ಆಪಾದಿತರಿಗೆ ಮೇಲೆ ಓದಲಾದ ಕ್ರಮಾಂಕ (4) ರ ಆದೇಶದಲ್ಲಿ ಈ ಕೆಳಕಂಡ ದಂಡನೆ ವಿಧಿಸಲಾಗಿತ್ತು.

| ಕ್ರ.ಸಂ. | ಅಧಿಕಾರಿಯ ಹೆಸರು | ವಿಧಿಸಲಾದ ದಂಡನೆ |
|---|---|---|
| 1 | ಶ್ರೀ ಎಂ.ಎನ್.ಶಂಕರನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಾಗಡಿ | ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 19057 ರ ನಿಯಮ 8(ivಎ) ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಎರಡು ಹಂತವನ್ನು ಸಂಚಿತ ಪರಿಣಾಮ ಸಹಿತವಾಗಿ ಕೆಳಗಿಳಿಸುವ ದಂಡನೆ ವಿಧಿಸಿದೆ. |
| 2 | ಶ್ರೀ ಎಂ.ವಿ.ರವಿನಂದನ, ಹಿಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಾಗಡಿ | ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 8(iii) ರ ಅನುಸಾರ ಸದರಿಯವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವ ದಂಡನೆ ವಿಧಿಸಿದೆ. |

ಮೇಲ್ಕಂಡ ದಂಡನಾದೇಶವನ್ನು ಪ್ರಶ್ನಿಸಿ, ಶ್ರೀ ಎಂ.ಎನ್.ಶಂಕರನಾರಾಯಣ ಮತ್ತು ಶ್ರೀ ಎಂ.ವಿ.ರವಿನಂದನ್ ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಕ್ರಮವಾಗಿ ಅರ್ಜಿ ಸಂಖ್ಯೆ: 7395/2018 ಮತ್ತು 7394/18 ನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯ ಮಂಡಳಿಯು ಮೇಲೆ ಒದಲಾದ ಕ್ರಮಾಂಕ (5) ರ ದಿನಾಂಕ: 20.08.2019 ರಂದು ನೀಡಿರುವ ತೀರ್ಪಿನಲ್ಲಿ ದಿನಾಂಕ:27.09.2018 ರ ದಂಡನಾದೇಶವನ್ನು ತಳ್ಳಿಹಾಕುವುದರೊಂದಿಗೆ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ:-

**" The applications are allowed. The impugned order bearing No: ಗ್ರಾಅಪ 55 ಇಎನ್‌ಕ್ಯೂ 2018, dated:27.09.2018 ( Annexure –A9 in both the applications) passed by the respondent is hereby set aside. The respondent authority has to consider the imposition of penalty afresh after following the due procedure and has to pass the appropriate order in accordance with law.**

ಮಾನ್ಯ ಕೆ.ಎ.ಟಿಯ ಆದೇಶದ ಹಿನ್ನಲೆಯಲ್ಲಿ ಶ್ರೀ ಎಂ.ವಿ.ರವಿನಂದನ್ ಇವರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ.ಎನ್.ಶಂಕರನಾರಾಯಣ ಇವರು ಮಾನ್ಯ ನ್ಯಾಯ ಮಂಡಳಿಯ ತೀರ್ಪಿನ ಪ್ರತಿಯನ್ನು ಲಗತ್ತಿಸಿ ಉಲ್ಲೇಖ(6) ರಲ್ಲಿ ಮನವಿ ಸಲ್ಲಿಸಿ ಮಾನ್ಯ ನ್ಯಾಯ ಮಂಡಳಿಯ ಆದೇಶದ ಹಿನ್ನಲೆಯಲ್ಲಿ ಪ್ರಕರಣವನ್ನು ಪುನರ್ ಪರಿಶೀಲಿಸಿ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರವು ಮಾನ್ಯ ಕೆಎಟಿಯ ದಿನಾಂಕ:27.09.2018 ರ ತೀರ್ಪನಲ್ಲಿ ಉಲ್ಲೇಖಿಸಿದ್ದ ಪ್ರಕರಣ ಸಂಖ್ಯೆ:4158/2013 ರಲ್ಲಿ ದಿನಾಂಕ:26.10.2018 ರಲ್ಲಿ ತಿಳಿಸಿರುವಂತೆ ನಿಯಮ 8 (ivಎ) ರ ಅನುಸಾರ ದಂಡನೆ ವಿಧಿಸುವ ಸಂದರ್ಭದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 59(1)(ಎ)ನ್ನು ಪರಿಗಣಿಸಿ ಕ್ರಮ ಕೈಗೊಳ್ಳಬೇಕಾಗಿರುವುದನ್ನು ಗಮನಿಸಿ, ಸರ್ಕಾರದ ದಂಡನಾದೇಶವನ್ನು ತಳ್ಳಿ ಹಾಕಿರುವುದು ಸಮಂಜಸವಾಗಿರುತ್ತದೆ. ಈ ಕಾರಣದಿಂದ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಶ್ರೀ ಎಂ.ಎನ್.ಶಂಕರನಾರಾಯಣ ಹಿಂದಿನ, ಸ.ಕಾ.ಇಂ ಇವರ ಅರ್ಜಿ ಸಂಖ್ಯೆ:7395/2018 ಕ್ಕೆ ಸಂಬಂಧಿಸಿದಂತೆ ನೀಡಿರುವ ತೀರ್ಪನ್ನು ಪರಿಗಣಿಸಿ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಆರೋಪಗಳು ಸಾಭೀತಾಗಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ಸೂಕ್ತ ಬದಲಿ ಆದೇಶವನ್ನು ಹೊರಡಿಸುವುದು ಅಗತ್ಯವೆಂದು ಸರ್ಕಾರವು ನಿರ್ಧರಿಸಿರುತ್ತದೆ.

ಶ್ರೀ ಎಂ.ಎನ್.ಶಂಕರನಾರಾಯಣ ಇವರು ದಿನಾಂಕ:31.03.2019 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಈ ಕಾರಣದಿಂದ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳು 1957 ರ ನಿಯಮ 8 ರಡಿ ದಂಡನೆ ವಿಧಿಸಲು ಅವಕಾಶ ಇರುವುದಿಲ್ಲ. ಆದ್ದರಿಂದ, ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 214 ರಡಿ ದಂಡನೆ ವಿಧಿಸಲು ಅವಕಾಶ ಇರುವುದನ್ನು ಪರಿಗಣಿಸಿ, ಪ್ರಸಕ್ತ ಪ್ರಕರಣದಲ್ಲಿ ಸದರಿಯವರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 486 ಜಿಪಅ 18, ಬೆಂಗಳೂರು, ದಿನಾಂಕ:07.05.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಂ.ಎನ್. ಶಂಕರನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಾಗಡಿ (ಹಾಲಿ ನಿವೃತ್ತ) ಇವರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 214 (1) (ಎ) ರನ್ವಯ ಅವರ ನಿವೃತ್ತಿ ವೇತನದಲ್ಲಿ ಪ್ರತಿ ತಿಂಗಳು ರೂ.1,000/- (ಒಂದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಎರಡು ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

07/05/2020
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ. ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಶ್ರೀ ಎಂ.ಎನ್.ಶಂಕರನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್(ನಿವೃತ್ತ), ನಂ.200, 9 ನೇ ಮುಖ್ಯ ರಸ್ತೆ, 9ನೇ ಬ್ಲಾಕ್, ನಾಗರಬಾವಿ 2 ನೇ ಹಂತ, ಬೆಂಗಳೂರು-560072.
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.